ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.
ಸಿಸಿ ನಂಬರ್.1282/2023

| | | |
|---|---|---|
| ಸಾಕ್ಷಿಯ ಹೆಸರು | : ಬಸವರಾಜೇಶ್ವರಿ | ಸಿ.ಡಬ್ಲ್ಯು 7 |
| ಗಂಡನ ಹೆಸರು | : ಸುರೇಶ್ | ಪಿ.ಡಬ್ಲ್ಯು 1 |
| ವಯಸ್ಸು | : 50 ವರ್ಷ | |
| ಉದ್ಯೋಗ | : ಗೃಹಿಣಿ | |
| ವಾಸ ಸ್ಥಳ | : ದೋರನಾಳ್ | |

ದಿನಾಂಕಃ29.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು:

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ದಿನಾಂಕ 07.12.2021 ರಂದು ನನ್ನ ಮಗನಾದ ತೀರ್ಥರೂಪ ಈತನು ರಸ್ತೆ ಅಪಘಾತದಲ್ಲಿ ಮರಣ ಹೊಂದಿದ್ದಾನೆ. ಆತನು ಚಾಲಕ ವೃತ್ತಿ ಮಾಡುತ್ತಿದ್ದ ಮೇಲೆ ಹೇಳಿದ ದಿನಾಂಕದಂದು ಲಾರಿಯ ಲಾಕ್ ಅನ್ನು ಪರೀಕ್ಷೆ ಮಾಡಬೇಕೆಂದು ಸಂಜೆ 6.30 ರ ಸುಮಾರಿಗೆ ಲಕ್ಷ್ಮೀಸಾಗರದಲ್ಲಿ ಇದ್ದ ನಮ್ಮ ಮನೆಯಿಂದ ಬಜಾಜ್ ವಾಹನ ನಂ.ಕೆ.ಎ.66-ಜೆ.0179 ವಾಹನವನ್ನು ತೆಗೆದುಕೊಂಡು ತರೀಕೆರೆಗೆ ಹೋಗಿದ್ದನು. ನನಗೆ ರಾತ್ರಿ 8 ಗಂಟೆಯ ಸುಮಾರಿಗೆ ನನ್ನ ಮಗನ ಗೆಳೆಯನಾದ ದರ್ಶನ್ ಅಂದರೆ CW-11 ಈತನು ದೂರವಾಣಿ ಕರೆ ಮಾಡಿ ನನ್ನ ಮಗನಿಗೆ ಗೂಡ್ಸ್ ಶೆಡ್ ರೋಡ್ ನಲ್ಲಿ ಅಪಘಾತ ಆಗಿದೆ ಆತನನ್ನು ತರೀಕೆರೆಗೆ ಕರೆದುಕೊಂಡು ಹೋಗುತ್ತಿದ್ದೇವೆ ಎಂದು ತಿಳಿಸಿದನು. ನಾನು ಪಕ್ಕದ ಮನೆಯವರ ಸಹಾಯವನ್ನು ಪಡೆದುಕೊಂಡು ತರೀಕೆರೆಯ ಸರ್ಕಾರಿ ಆಸ್ಪತ್ರೆಗೆ ಬಂದೆನು. ನಾನು ಅಲ್ಲಿಗೆ ಹೋಗುವಷ್ಟರಲ್ಲಿ ನನ್ನ ಮಗನನ್ನು ಶಿವಮೊಗ್ಗ ಆಸ್ಪತ್ರೆಗೆ ಕಳುಹಿಸಿದ್ದರು. ನಾನು ವಿಷಯ ತಿಳಿದು ಶಿವಮೊಗ್ಗಕ್ಕೆ ಹೋದೆನು. ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯವರು ಕೂಡ ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ನಮಗೆ ತಿಳಿಸಿದರು. ಕಾರಣ ಆಂಬ್ಯುಲೆನ್ಸ್‌ನಲ್ಲಿ ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಲ್ಲಿ ಆತನಿಗೆ ಶಸ್ತ್ರ ಚಿಕಿತ್ಸೆಯನ್ನು ಕೂಡ ಮಾಡಿದರು. ಅಲ್ಲಿಯ ವೈದ್ಯರ ಸಲಹೆಯ ಮೇರೆಗೆ ತರೀಕೆರೆಯಲ್ಲಿ ಫಾಲೋಅಪ್ ಚಿಕಿತ್ಸೆ ಕೊಡಿಸುತ್ತಿದ್ದೆನು. ಆದರೂ ಕೂಡ ಚಿಕಿತ್ಸೆ ಫಲಕಾರಿಯಾಗದೇ ನನ್ನ ಮಗ ದಿನಾಂಕ 07.06.2022 ರಂದು ಬೆಳಗ್ಗೆ 6 ಗಂಟೆಯ ಸಮಯಕ್ಕೆ ನನ್ನ ಮಗ ಮರಣ ಹೊಂದಿದ್ದಾನೆ.

ಹಾದಿಕೆರೆ ಗ್ರಾಮದ ಬಂಡಾರಿ ಮೋಹನ್ ಎಂಬ ವ್ಯಕ್ತಿಯು ತಮ್ಮ ಬಜಾಜ್ ಡಿಸ್ಕವರಿ ಮೋಟಾರ್ ಸೈಕಲ್ ಮೇಲೆ 3 ಸವಾರರು ಕೂಡಿಕೊಂಡು ಬಂದು ವೇಗದಿಂದ ಚಾಲನೆ ಮಾಡಿ

ಎದುರುಗಡೆಯಿಂದ ನನ್ನ ಮಗನ ಮೋಟಾರ್ ಸೈಕಲ್ಗೆ ಡಿಕ್ಕಿ ಪಡಿಸಿದ್ದಾನೆ ಎಂದು ನನ್ನ ಇನ್ನೊಬ್ಬ ಮಗನಿಂದ ಮತ್ತು ಪೋಲೀಸರಿಂದ ಕೇಳಿ ಗೊತ್ತಾಗಿದೆ. ಆರೋಪಿಯ ವಾಹನ ನಂ.ಕೆ.ಎ.18 ಡಬ್ಲ್ಯೂ 9641 ಎಂದು ಕೇಳಿ ಗೊತ್ತಾಯಿತು. ಪೋಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿದ್ದಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯ ತಪ್ಪಿನಿಂದಲೇ ಅಪಘಾತ ಆಗಿರುತ್ತದೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>

ನನ್ನ ಮಗ ಮನೆಯಲ್ಲಿ ರಾತ್ರಿ 11.45 ಕ್ಕೆ ಮರಣ ಹೊಂದಿದ್ದಾನೆ ಎಂದರೆ ಸಾಕ್ಷಿಯು ನಾನು ಬೆಳಗ್ಗೆ 6.00 ಗಂಟೆಗೆ ನೋಡಿದ್ದೇನೆ ಎನ್ನುತ್ತಾರೆ. ರಾಣೆಬೆನ್ನೂರಿನಲ್ಲಿ ನಾನು ನನ್ನ ಮಗನ ಮರಣ ಕುರಿತು ಪರಿಹಾರ ಕೋರಿ ಪ್ರಕರಣ ದಾಖಲಿಸಿದ್ದೇನೆ. ನನಗೆ ಪರಿಹಾರ ಧನ ಕೂಡ ಸಿಕ್ಕಿದೆ ಎಂದರೆ ಸರಿ. ನನ್ನ ಮಗನ ಬೈಕಿನ ಮಾಲೀಕ ಆತನೇ ಇರುತ್ತಾನೆ. ನನ್ನ ಮಗನಿಗೆ ಚಾಹನ ಚಾಲನೆ ಮಾಡಲು ಚಾಲನಾ ಪರವಾನಗಿ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಗನಿಗೆ ಮದ್ಯಪಾನ ಮಾಡುವ ಅಭ್ಯಾಸ ಇತ್ತು ಎಂದರೆ ಸರಿಯಲ್ಲ. ಅಪಘಾತ ಯಾವ ರೀತಿ ಆಗಿದೆ ಎಂದು ನಾನು ಪ್ರತ್ಯಕ್ಷವಾಗಿ ನೋಡಿಲ್ಲ ಎಂದರೆ ಸರಿ. ಹಾಗಾಗಿ ನನಗೆ ವೈಯುಕ್ತಿಕವಾದ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ಮಗನಿಂದ ಮತ್ತು ಪೋಲೀಸರಿಂದ ತಿಳಿದುಕೊಂಡಿದ್ದೇನೆ ಎಂದು ಹೇಳುತ್ತಾರೆ. ನನ್ನ ಮಗನ ವಾಹನಕ್ಕೆ ಇನ್ಸೂರೆನ್ಸ್ ಇಲ್ಲದ ಕಾರಣ ಆರೋಪಿಯ ವಾಹನವನ್ನು ಈ ಪ್ರಕರಣದಲ್ಲಿ ಸೇರಿಸಲಾಗಿದೆ ಎಂದರೆ ಸರಿಯಲ್ಲ. ನನ್ನ ಮಗನ ತಪ್ಪಿನಿಂದಲೇ ಅಪಘಾತ ಆಗಿದೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ :</u> ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.